ನಮ್ಮ ಬದುಕನ್ನು ಕಸಿಯುವುದಕ್ಕೆ ಯಾರಿಗೂ ಕೂಡ ಅಧಿಕಾರ ಇಲ್ಲ, ಖಂಡಿತ ಅದಕ್ಕೆ ಬಿಡುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಅಂತಹ ಯೋಚನೆಯನ್ನು ದಯಮಾಡಿ ಕೈ ಬಿಡಬೇಕು.

ಶ್ರೀ ಹೆಚ್.ಡಿ.ದೇವೇಗೌಡ:- ಈ ರಾಜ್ಯದ ಅಭಿವೃದ್ಧಿ ಮಾಡತಕ್ಕಂತಹ ಕಾಲದಲ್ಲಿ ಯಾರ ಶವದ ಮೇಲೆ ಮಾಡಬೇಕಾದ ಅವಶ್ಯಕತೆ ಇಲ್ಲ. ನಮಗೆ ಸರ್ಕಾರಕ್ಕೆ ಪರಿಜ್ಞಾನ ಇದೆ ಎನ್ನತಕ್ಕಂಥದ್ದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ. ಇವತ್ತು ರಾಜ್ಯದ ಜಲಸಂಪತ್ತನ್ನು ಬಳಕೆ ಮಾಡತಕ್ಕಂಥದ್ದು ಯಾವ ಕಾಲದಲ್ಲಿ ಎಷ್ಟು ಇವತ್ತು ಅದರ ಉಪಯುಕ್ತತೆಯನ್ನು ನಾವು ಮಾಡಿಕೊಳ್ಳಬೇಕು, ಹಾಗೆ ಮಾಡುವಾಗ ಯಾವುದೇ ಭಾಗಕ್ಕೆ ಭಾರಿ ಅನಾಹುತ ಆಗದಂತೆ ನೋಡಿಕೊಳ್ಳುತ್ತೇವೆ. ಅವರು ಏನು ಹೇಳಿದರು ಮಾಲತಿ ಕೆಲಸ ಇಲ್ಲಿ ಏನು ನಡೆಯುತ್ತಿಲ್ಲ, ಆ ಕಾರ್ಯಕ್ರಮ ಇವತ್ತು ಕೈಗೆತ್ತಿಕೊಳ್ಳುವುದಕ್ಕೆ ಮುಂಚೆ ನೀವು ನಮ್ಮ ಶಬ್ದ ಮೇಲೆ, ನಮ್ಮ ತಾಲ್ಲೂಕಿನ ಶವದ ಮೇಲೆ, ಯಾವ ಶವನೂ ಬೇಡ ಜೀವಂತವಾಗಿರಿ, ನಿಮ್ಮ ತಾಲ್ಲೂಕು ಜೀವಂತವಾಗಿರಲಿ, ಏನೂ ಕೆಲಸ ಪ್ರಾರಂಭವಾಗಿಲ್ಲ ಅಲ್ಲಿ. ಆವೇಶದ ಭರದಲ್ಲಿ ಏನೂ ಹೇಳುವುದು ಬೇಡ. ಭದ್ರಾ ಯೋಜನೆಯಲ್ಲಿ ಇವತ್ತು ಚಿತ್ರದುರ್ಗ ಮತ್ತು ತುಮಕೂರಿಗೆ ಏನು ಅವರ ಬವಣೆ ಇದೆ ಅದನ್ನು ನಿವಾರಣೆ ಮಾಡುವುದಕ್ಕೆ ಸ್ವಲ್ಪ ಮಟ್ಟಿಗೆ ಪ್ರಯತ್ನ ಮಾಡಬಹುದು ಎನ್ನುವ ಪ್ರಶ್ನೆ ಇದೆ, ಹಾಗೆ ಮಾಡತಕ್ಕಂತಹ ಕಾಲದಲ್ಲಿ ಇವತ್ತು ಸಾಧಕ ಬಾಧಕ ಎಲ್ಲವನ್ನು ಯೋಚನೆ ಮಾಡುತ್ತೇವೆ. ಅದಕ್ಕೆ ಇಟ್ಟಿದ್ದಂತಹ ನೀರಿನ ಪ್ಲಾನ್ ಏನಿದೆ ಅದನ್ನು ಬದಲಾವಣೆ ಮಾಡಿದ್ದಾರೆ. ಇವತ್ತು ಸ್ಟೋರೇಜ್ ಏನು ಕಡಿಮೆಯಾಗಿದೆ ಅದರಲ್ಲಿ ಉಳಿತಾಯದ ನೀರಿನಲ್ಲಿ ಬಳಕೆ ಮಾಡುವುದಕ್ಕೆ ಸಾಧ್ಯ ? ಎಂದು ನೋಡುತ್ತಿದ್ದೇವೆ. ಅದು ಭದ್ರಾಗೆ ಸಂಬಂಧಪಟ್ಟಿದೆಯೇ ಹೊರತು, ಅದು ಅಪ್ಪರ್ ಕೃಷ್ಣಾ ತುಂಗಾಕ್ಕೆ ಸಂಬಂಧಪಟ್ಟಿದ್ದು ಅಲ್ಲ ಎಂದು ಹೇಳುತ್ತೇವೆ.

ಅಧ್ಯಕ್ಷರು:- ಚರ್ಚೆ ಮುಕ್ತಾಯವಾಯಿತು.

ವರದಿಗಳನ್ನೊಪ್ಪಿಸುವುದು

ಡಾ॥ ಎ.ಬಿ.ಮಲಕರೆಡ್ಡಿ (ಯಾದಗಿರಿ):- ಮಾನ್ಯ ಅಧ್ಯಕ್ಷರೆ, 1995-96ನೇ ಸಾಲಿನ ಆರೋಗ್ಯ ಇಲಾಖೆಯ ವಿಷಯ ಸಮಿತಿಯ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು:- ವರದಿಯನ್ನೊಪ್ಪಿಸಲಾಯಿತು.

ಪ್ರಕಟಣೆ

1996-97ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ವಿವಿಧ ಸಮಿತಿಗಳ ಸದಸ್ಯ ಸ್ಥಾನಕ್ಕೆ ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಗೆ ಅನುಗುಣವಾಗಿ ನಾಮ ಪತ್ರಗಳು ಬಂದಿರುವುದರಿಂದ ವಿಧಾನ ಸಭೆಯಿಂದ ವಿವಿಧ ಸಮಿತಿಗಳಿಗೆ ಈ ಕೆಳಗೆ ಸೂಚಿಸಿರುವ ಸದಸ್ಯರುಗಳು ಚುನಾಯಿತರಾಗಿರುತ್ತಾರೆಂದು ಘೋಷಿಸುತ್ತೇನೆ:-

1. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ

ಶ್ರೀಯುತರುಗಳಾದ:-

1. ಸಿ.ಎಂ. ಉದಾಸಿ
2. ಹೆಚ್.ನಾಗಪ್ಪ
3. ಕೃಷ್ಣ
4. ಕೆ.ವೆಂಕಟೇಶ್
5. ಹೆಚ್.ಡಿ.ರೇವಣ್ಣ
6. ಡಾ।। ಎಂ.ಪಿ. ಕರ್ಕಿ
7. ಎ.ರುಕ್ಮಯ್ಯ ಪೂಜಾರಿ
8. ಮಲ್ಲಿಕಾರ್ಜುನ ಖರ್ಗೆ
9. ಸಿ.ಆರ್.ಸಗೀರ್ ಅಹಮದ್
10. ಜಿ.ಹೆಚ್.ತಿಪ್ಪಾರೆಡ್ಡಿ
11. ಕಮರುಲ್ ಇಸ್ಲಾಮ್
12. ಬಿ.ಐ.ಪಾಟೀಲ್

2. ಸಾರ್ವಜನಿಕ ಉದ್ದಿಮೆಗಳ ಸಮಿತಿ

1. ಬಿ.ಸೋಮಶೇಖರ್
2. ಎಸ್.ಆರ್.ಲಕ್ಷ್ಮಯ್ಯ
3. ಚಂದ್ರಶೇಖರ ರೆಡ್ಡಿ ದೇಶಮುಖ್ ಮದನ
4. ಸೋಮ್ಲಾನಾಯಕ್
5. ಚಂದ್ರಕಾಂತ ಬೆಲ್ಲದ್
6. ಎಂ.ಶ್ರೀನಿವಾಸ್
7. ರಮಾನಾಥರೈ
8. ಜಿ.ವಿ.ಶ್ರೀರಾಮರೆಡ್ಡಿ
9. ಪ್ರಕಾಶ್ ಹುಕ್ಕೇರಿ

3. ಅಂದಾಜುಗಳ ಸಮಿತಿ

1. ಗೋವಿಂದ ಎಂ.ಕಾರಜೋಳ
2. ಶರಣಬಸಪ್ಪ ದರ್ಶನಾಪುರ
3. ಹೆಚ್.ಎನ್.ಮಹದೇಶಪ್ರಸಾದ್
4. ಬಿ.ಸತ್ಯನಾರಾಯಣ
5. ಬಿ.ಬಿ.ಶಿವಕುಮಾರ್
6. ಜಿ.ಚಂದ್ರಣ್ಣ
7. ಆರ್.ಶ್ರೀನಿವಾಸ್
8. ನಾಗಪ್ಪ ಸಾಲೋನಿ

9. ಬಿ.ಬಿ.ಶಿವಪ್ಪ
10. ಕೆ.ಜಯರಾಮಶೆಟ್ಟಿ
11. ಶ್ರೀರಂಗದೇವರಾಯಲು
12. ಡಿ.ಬಿ. ಇನಾಂದಾರ್
13. ಹೆಚ್.ಬಿ. ಕೃಷ್ಣಮೂರ್ತಿ
14. ಟಿ.ಹೆಚ್.ಬಸವರಾಜ್
15. ಎಸ್.ರಾಘವೇಂದ್ರನ್

ಹಕ್ಕುಬಾಧ್ಯತಾ ಸಮಿತಿ

1. ಅಮರನಾಥ ಶೆಟ್ಟಿ
2. ಕೆ.ಎಂ. ಕೃಷ್ಣಮೂರ್ತಿ
3. ಎನ್.ರಾಜಣ್ಣ
4. ಎಂ.ಪಿ.ಅಪ್ಪಚ್ಚುರಂಜನ್
5. ಡಾ। ಯು.ಚಿತ್ತರಂಜನ್
6. ಎಸ್. ಶಿವಶಂಕರಪ್ಪ
7. ವಾಟಾಳ್ ನಾಗರಾಜ್

ಅಧೀನ ಶಾಸನಾ ರಚನಾ ಸಮಿತಿ

1. ಎಂ.ದಿವಾಕರಬಾಬು
2. ಕೆ.ಶರಣಪ್ಪ
3. ಶಿವಪುತ್ರಪ್ಪ ಎಂ.ದೇಸಾಯಿ
4. ಜಿ.ಎ.ಫರ್ನಾಂಡೀಸ್
5. ಶ್ರೀಮತಿ ಪ್ರಮೀಳಾ ನೇಸರ್ಗಿ
6. ಕಾಗೋಡು ತಿಮ್ಮಪ್ಪ
7. ಮರುಳಸಿದ್ದಪ್ಪನಗೌಡ ಟಿ.
8. ಡಿ.ಕೆ.ಶಿವಕುಮಾರ್

6. ವಿಧಾನ ಸಭೆಯ ಸರ್ಕಾರಿ ಭರವಸೆಗಳ ಸಮಿತಿ

1. ಬಾಳಸಾಹೇಬ್ ವಡ್ಡರ್
2. ಸುಭಾಶ್ ಜೋಷಿ
3. ಬಿ.ಬಿ.ಹೇಮರೆಡ್ಡಿ
4. ಗಂಗಾಧರ ಹನುಮಂತ
5. ಹೆಚ್.ಸಿ.ಬಾಲಕೃಷ್ಣ

6. ಎನ್. ಯೋಗೀಶ್ ಭಟ್
7. ಡಿ. ಆರ್. ಪಾಟೀಲ್
8. ರವಿಕಾಂತ್ ಎಸ್ ಪಾಟೀಲ್

7. ಖಾಸಗಿ ಸದಸ್ಯರ ವಿಧೇಯಕಗಳ ಸಮಿತಿ

1. ಗಂಗಣ್ಣ ಮಹಂತ ಶೆಟ್ಟರ್
2. ಚಂದ್ರಪ್ಪ
3. ಸಿ. ಚನ್ನಿಗಪ್ಪ
4. ಮಲ್ಲಿಕಾರ್ಜುನ ಎಸ್. ಅಕ್ಕಿ
5. ಜಿ. ಶಂಕರಗೌಡ
6. ಎಂ. ಜಯರಾಮಶೆಟ್ಟಿ
7. ವಿಜಯಕುಮಾರ್ ಭೀಮಣ್ಣ ಖಂಡ್ರೆ
8. ಕೆ. ಪ್ರತಾಪಚಂದ್ರ ಶೆಟ್ಟಿ
9. ನಾರಾಯಣರಾವ್ ತರಳೆ
10. ಜಿ. ಎಸ್. ಶಿವನಂಜಪ್ಪ

8. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿ

1. ವಸಂತ ಬಂಗೇರ
2. ಎ. ಆರ್. ಕೃಷ್ಣಮೂರ್ತಿ
3. ಚಂದ್ರಶೇಖರ ನಾಯಕ್
4. ಎಸ್. ಜಯಣ್ಣ
5. ಎನ್. ಬಸವಯ್ಯ
6. ಸಿ. ಹೆಚ್. ವಿಜಯಶಂಕರ
7. ಬಿ. ನಂಜಾಮರಿ
8. ಎಸ್. ಬಿ. ಘಾಟಿಗೆ
9. ಜುಲ್ಫೀಕರ್ ಹಷ್ಮಿ

9. ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿ

1. ಡಾ॥ ಎಂ. ಶಂಕರನಾಯಕ್
2. ಎಸ್. ಕೃಷ್ಣಪ್ಪ
3. ಟಿ. ಎಂ. ಚಂದ್ರಶೇಖರಯ್ಯ
4. ಮಾಲೀಕಯ್ಯ ಗುತ್ತೇದಾರ್
5. ವಸಂತ ಅಸ್ನೋಟಿಕರ್

6. ಎಂ. ಶಿವಾನಂದ
7. ಅಶೋಕ ಕಾಟ್ವೆ
8. ಕೆ. ವಿರೂಪಾಕ್ಷಪ್ಪ

10. ವಸತಿ ಸೌಕರ್ಯ ಸಮಿತಿ

1. ಶ್ರೀ ಶೈಲಪ್ಪ ಬಿದರೂರ
2. ಶಿವಾನಂದ ಎಸ್. ಪಾಟೀಲ್
3. ಯು. ಹೆಚ್. ತಿಮ್ಮಣ್ಣ
4. ಹೆಚ್. ಎಸ್. ಪ್ರಕಾಶ್
5. ಮಾರುತಿರಾವ್ ಪವಾರ್ ಇ.
6. ಡಿ. ಎಸ್. ಮಾದಪ್ಪ
7. ಬಿ. ಎಸ್. ಪಾಟೀಲ್ (ಮನಗೋಳಿ)
8. ಬಿ. ಮುನಿಯಪ್ಪ

ಕರ್ನಾಟಕ ವಿಶ್ವವಿದ್ಯಾನಿಲಯದ ಸೆನೆಟ್

1. ಕಾರಜೋಳ ಗೋವಿಂದ ಮಕಟಪ್ಪ
2. ಸಿ. ಎಂ. ಮಾಮನಿ
3. ಸುಭಾಶ್ ಜೋಷಿ
4. ಎಸ್. ಎ. ಅಂಬಡಗಟ್ಟಿ
5. ಯು. ಬಿ. ಬಣಕಾರ್

ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹತ್ತನೇ ವಿಧಾನ ಸಭೆಯ ಐದನೇ ಅಧೀವೇಶನದಲ್ಲಿನ ಇಲ್ಲಿಯವರೆಗೆ ನಡೆದ ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಸಭೆಯ ಮುಂದೆ ಮಂಡಿಸಬಯಸುತ್ತೇನೆ.

ಸೋಮವಾರ ದಿನಾಂಕ 19ನೇ ಫೆಬ್ರವರಿ, 1996ರಂದು ಪ್ರಾರಂಭವಾದ ಈ ಸದನವು 16 ದಿನಗಳ ಕಾಲ ಕಾರ್ಯಕಲಾಪಗಳನ್ನು ನಡೆಸಿದೆ.

ಸದನವು 95 ಘಂಟೆಗಳ ಕಾಲ ಕಾರ್ಯಕಲಾಪಗಳನ್ನು ನಡೆಸಲಾಗಿರುತ್ತದೆ.

ಇತ್ತೀಚೆಗೆ ನಿಧನರಾದ 6 ಗಣ್ಯರುಗಳ ಗೌರವಾರ್ಥ ಸಂತಾಪ ನಿರ್ಣಯವನ್ನು ಅಂಗೀಕರಿಸಲಾಯಿತು.

ಈ ಅವಧಿಯಲ್ಲಿ 1232 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 165 ಚುಕ್ಕೆ ಗುರುತಿನ ಪ್ರಶ್ನೆಗಳಲ್ಲಿ 157 ಪ್ರಶ್ನೆಗಳಿಗೂ, 759 ಚುಕ್ಕೆ ರಹಿತ ಪ್ರಶ್ನೆಗಳ ಪೈಕಿ 542 ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಲಾಯಿತು.